# ಹಮ್ಮಿಲ್ಲದ ಹಂಬಲ್ ಹುಡುಗಿ!

## ವಿದ್ಯಾಶ್ರೀ ಜಯರಾಮ್
### ಉದಯದ 'ಕಾವ್ಯಾಂಜಲಿ' ಕಾವ್ಯಾ

◆ **ನಿಮ್ಮ ಪರಿಚಯ ಮಾಡಿ ಕೊಡಿ..**

ನನ್ನ ಹೆಸರು ವಿದಾಶ್ರೀ ಜಯರಾಮ್, ತಂದೆ ಜಯರಾಮ್ ಕೃಷ್ಣಮೂರ್ತಿ, ತಾಯಿ ಪ್ರಭಾಮಣಿ. ಅವರು ಈಗಿಲ್ಲ. ತೆರೆಗೆ ಬಂದು ಎರಡು ವರ್ಷದ ಮೇಲಾಯಿತು. ಕಲರ್ಸ್ ಕನ್ನಡದ 'ಥಕಧಿಮಿತ' ರಿಯಾಲಿಟಿ ಶೋದಲ್ಲಿ ಭಾಗವಹಿಸಿದೆ. ನಂತರ ಸ್ಟಾರ್ ಸುವರ್ಣದ 'ವರಲಕ್ಷ್ಮಿ ಸ್ಟೋರ್ಸ್'ನಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದೆ. ಈಗ ಉದಯದಲ್ಲಿ 'ಕಾವ್ಯಾಂಜಲಿ'ಯಲ್ಲಿ ನಟಿಸುತ್ತಿದ್ದೇನೆ. ನಮ್ಮ ಮೂಲ ಹಾಸನ. ನಾನು ಹುಟ್ಟಿದ್ದು ಬೆಳೆದಿದ್ದು ಬೆಂಗಳೂರು. ಓದಿದ್ದು ಡಿಪ್ಲೊಮ ಇನ್ ಏವಿಯೇಷನ್. ಮೂರು ವರ್ಷ ಗಗನಸಖಿಯಾಗಿದ್ದೆ. ಈಗ ನಟಿಯಾಗಿದ್ದೇನೆ.

◆ **ಗಗನಸಖಿ ಹಾಗೂ ನಟಿ ಈ ಎರಡು ವೃತ್ತಿಗಳ ನಡುವೆ ನೀವು ಗಮನಿಸಿದ ಮುಖ್ಯ ವ್ಯತ್ಯಾಸಗಳೇನು?**

ಗಗನಸಖಿ ಸೂಕ್ಷ್ಮ ಸಂವೇದನೆಯನ್ನು ಹೊಂದಿರಬೇಕು. ಆಕೆಯ ಮಾತು ಸ್ಪಷ್ಟವಿರಬೇಕು; ವಿನಂತಿಯ ಧಾಟಿಯಲ್ಲಿರಬೇಕು. ಪ್ರಯಾಣಿಕರೇ ಅತಿಥಿಗಳು ಎನ್ನುವಂತೆ ನಡವಳಿಕೆ ಇರಲೇಬೇಕಾಗುತ್ತದೆ. ಸಂವಹನ ಕೌಶಲ್ಯ ಚೆನ್ನಾಗಿರಬೇಕು. ಸೌಂದರ್ಯವನ್ನು ಕಾಪಾಡಿಕೊಳ್ಳಬೇಕು, ಎತ್ತರ– ತೂಕದಲ್ಲಿ ಸಮತೋಲನ ಇರಬೇಕು. ವೃತ್ತಿಪರತೆ ಇರಬೇಕು. ಹೊಂದಾಣಿಕೆಯ ಮನೋಭಾವ ಇರಬೇಕು.

ನಟಿಗೆ ಅತಿಯಾದ ನಿರೀಕ್ಷೆಗಳು ಇರಬಾರದು. ಆಡಿಷನ್ ನೀಡಿ ಬಂದ ನಂತರ ಪಾತ್ರದ ಬಗ್ಗೆ ನಮ್ಮ ಗಮನ ಕೇಂದ್ರೀಕರಿಸಿಕೊಳ್ಳಬೇಕು. ಅವಕಾಶ ಸಿಗದಿದ್ದರೆ ಮತ್ತೊಂದು ಪಾತ್ರದ ಕಡೆ ಗಮನಕೊಡಬೇಕು. ಬೇರೆ ಬೇರೆ ಪಾತ್ರಗಳು ಬಂದಾಗ ಅದನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಿರಬೇಕು. ನವರಸಗಳ ಅರಿವೂ ಮುಖ್ಯ. ಆಡಿಷನ್ ಕೊಟ್ಟರೂ ಅವಕಾಶ ಸಿಗಲಿಲ್ಲ ಎಂದು ಕೊರಗದೆ ನಿರಂತರ ಪ್ರಯತ್ನ ಮಾಡಬೇಕು.

◆ **ವೃತ್ತಿಯಿಂದ ಸುರಕ್ಷಿತವಾಗಿದ್ದವರು, ನಟನೆಯ ಅನಿಶ್ಚಿತ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದು ಏಕೆ?**

ಎಲ್ಲ ವೃತ್ತಿಗಳಲ್ಲಿಯೂ ಅದರದೇ ಆದ ಸವಾಲುಗಳು ಇರುತ್ತವೆ. ಬೆಂಗಳೂರಿನಿಂದ ದೆಹಲಿಗೆ ಹೋದರೆ ಹವಾಮಾನದಲ್ಲಿ ತುಂಬ ವ್ಯತ್ಯಾಸವಿರುತ್ತದೆ. ಅದನ್ನು ನಾವು ದೈಹಿಕವಾಗಿ– ಮಾನಸಿಕವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕು. ವಿಮಾನಯಾನದಲ್ಲಿ ಗಗನಸಖಿಯ ಜವಾಬ್ದಾರಿಯೂ ಹೆಚ್ಚಿರುತ್ತದೆ. ಊಟ– ತಿಂಡಿ ವಿಷಯದಲ್ಲೂ ಏರುಪೇರಾಗುತ್ತಿರುತ್ತದೆ.

ಇಷ್ಟಪಟ್ಟು ಗಗನಸಖಿಯಾದ ನನ್ನನ್ನು ನಟನೆಯತ್ತ ಡೈವರ್ಟ್ ಮಾಡಿದ್ದು ಒಂದು ವ್ಯಾಟ್ಸ್‌ಆ್ಯಪ್ ಸಂದೇಶ. ಭರತನಾಟ್ಯ ತುಂಬ ಇಷ್ಟದ ಕಲೆ. ನನ್ನ ತಾಯಿಯ ಆಸೆಯೂ ಅದೇ ಆಗಿತ್ತು. ಹಾಗಾಗಿ ಡಾನ್ಸ್ ರಿಯಾಲಿಟಿ ಶೋ ಆಡಿಷನ್ ಆಹ್ವಾನದ ಸಂದೇಶವನ್ನು ಸ್ವೀಕರಿಸಿದೆ. ನನ್ನ ಪ್ರತಿಭೆಯನ್ನು ಅನಾವರಣ ಮಾಡಲು ಅವಕಾಶ ಸಿಗಬಹುದು ಎಂದುಕೊಂಡು ಬಂದೆ.



ಅದು ನನಗೆ ಹೊಸ ಇಮೇಜ್ ನೀಡಿತು. ಅದಾದ ಮೇಲೆ ಕಿರುತೆರೆಯಲ್ಲಿ ತುಂಬ ಅವಕಾಶಗಳ ನನ್ನನ್ನು ಹುಡುಕಿಕೊಂಡು ಬಂದವು.

ವೃತ್ತಿ –ಪ್ರವೃತ್ತಿ ಜೀವನಶೈಲಿಯಲ್ಲಿ ತುಂಬಾನೇ ವ್ಯತ್ಯಾಸಗಳಿವೆ. ಏರ್‌ಪೋರ್ಟ್ ಒಳಗೆ ಪ್ರವೇಶ ಮಾಡುತ್ತಿದ್ದೇನೆ ಅಂದರೆ, ನನ್ನ ವೇಷಭೂಷಣ ಬದಲಾಗುತ್ತದೆ. ಮಾತ್ರ ಅಲ್ಲ, ನನ್ನ ಕೆಲಸದ ಅವಧಿ ಮುಗಿಯುವ ತನಕ ನಾನು ವಿದ್ಯಾಶ್ರೀ ಆಗಿರುವುದಿಲ್ಲ. ಗಗನಸಖಿ ಮಾತ್ರ. ಒಬ್ಬ ಕಲಾವಿದೆಯಾದರೆ ನಮ್ಮ ಪ್ರತಿಭೆಯನ್ನು ಮತ್ತೊಬ್ಬರು ಗುರುತಿಸಿದರೆ ಖುಷಿ ಅನ್ನಿಸುತ್ತೆ. ಅಲ್ಲಿ ಐಡೆಂಟಿಟಿ ಇರುತ್ತದೆ. ಭರತನಾಟ್ಯ ಕಲಾವಿದೆ ಆಗಿದ್ದರಿಂದ ನಟನೆ ಕಷ್ಟ ಅನ್ನಿಸಲೇ ಇಲ್ಲ. ಒಳ್ಳೆಯ ಕಲಾವಿದೆ ಆಗಬೇಕು ಎನ್ನುವ ಆಸೆ ನನ್ನದು. ಮೂರು–ನಾಲ್ಕು ಸಿನಿಮಾಕ್ಕೂ ಅವಕಾಶ ಬಂದಿವೆ. 'ಕಾವ್ಯಾಂಜಲಿ' ಈಗಷ್ಟೇ ಆರಂಭವಾಗಿದೆ. ಸಮಯ ಸಂಘರ್ಷ ಆಗದಂತೆ ಮುಂದಿನ ಆಯ್ಕೆ ಮಾಡಿಕೊಳ್ಳುತ್ತೇನೆ.

◆ **ನಿಮ್ಮ ವೃತ್ತಿಯಲ್ಲಿ ಎದುರಾಗುವ ಸೋಲನ್ನು ನೀವು ಹೇಗೆ ನೋಡುತ್ತೀರಿ?**

ಡಾನ್ಸ್ ಸ್ಪರ್ಧೆಯಲ್ಲಿ ಗೆಲ್ಲುವ ಸಾಧ್ಯತೆ ಇತ್ತು. ಮಧ್ಯದಲ್ಲಿ ತಾಲೀಮಿಗೆ ಸಮಯ ಸಾಕಾಗಲಿಲ್ಲ. ನಾನು ರಾಜೇಶ್ ಜೋಡಿಯಾಗಿದ್ದೆವು. ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಅಂತಿಮ ಸುತ್ತಿಗೆ ಹೋಗಲಾಗದೆ ಹೊರಬಂದಿದ್ದೇವೆ ಎನ್ನಬಹುದು. ಇದನ್ನು ಅಂದೇ ಅರ್ಥ ಮಾಡಿಕೊಳ್ಳಬೇಕಿತ್ತು. ಸೋಲೂ ಸಹಜ. ಸೋತೆವೆಂದು ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳಬಾರದು. ಒಂದು ಅವಕಾಶ ಇಲ್ಲ ಅಂದರೆ ಮತ್ತೊಂದು ಅವಕಾಶ ಸಿಕ್ಕೇ ಸಿಗುತ್ತದೆ. ಪಯತ್ನ ಮಾಡುತ್ತಿದ್ದರೆ ಯಶಸ್ಸು ಸಿಕ್ಕೇ ಸಿಗುತ್ತದೆ. ಯಶಸ್ಸು ಸಿಕ್ಕ ನಂತರವೂ ಹಮ್ಮಿಗೆ ಅವಕಾಶ ಇಲ್ಲದಂತೆ ಹಂಬಲ್ಲಾಗಿರಬೇಕು. ಆಗ ಮತ್ತಷ್ಟು ಬೆಳೆಯಬಹುದು.

◆ **'ಕಾವ್ಯಾಂಜಲಿ' ಹಳೆಯ ಕಥೆ ಎಂದು ಅನ್ನಿಸುವುದಿಲ್ಲವೇ?**

ಕಥೆ ತುಂಬ ಭಿನ್ನವೂ ಮತ್ತು ಸೊಗಸಾಗಿದೆ. ಕಾವ್ಯಾ– ಅಂಜಲಿ ದಾಯಾದಿ ಸಹೋದರಿಯರು. ಬಾಲ್ಯದಿಂದಲೂ ಪರಸ್ಪರರಲ್ಲಿ ಪ್ರೀತಿ– ವಾತ್ಸಲ್ಯ ಬೆಳೆದಿರುತ್ತದೆ. ಜೊತೆಯಲ್ಲೇ ಊಟ, ಆಟ, ಪಾಠವನ್ನು ಮಾಡಿ ದೊಡ್ಡವರಾಗಿದ್ದೇವೆ. ಕಾವ್ಯಾ– ಸುಶಾಂತ್ ನಡುವೆ ಪ್ರೀತಿ ಬೆಳೆಯುತ್ತದೆ. ಇವರಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಸನ್ನಿವೇಶ ನನಗೆ ಬರುತ್ತದೆ. ಅಂತಹ ಸಂಕಷ್ಟದಲ್ಲಿ ನಾನು ಎಂತಹ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಕುತೂಹಲವೇ ಕಥೆಯ ಹೂರಣ.

■ **ರಾಘವೇಂದ್ರ ಕೆ.**